

ಪಡೆದುಕೊಂಡು ತಿಳಿದೇ ಚಿಕಿತ್ಸೆ ಕೊಡಬೇಕು ಎಂದು ನಿರೀಕ್ಷಿಸುತ್ತೀರಾ? ಅದೇ ರೀತಿ ಸಕ್ಕರೆ ಕಾಯಿಲೆಯಾಗಿರಲಿ, ಕಾಲು ನೋವಾಗಿರಲಿ ಅಥವಾ ಲೈಂಗಿಕ ಸಮಸ್ಯೆಯಾಗಿರಲಿ, ವೈದ್ಯ ಚಿಕಿತ್ಸೆ ನೀಡುವುದು ತನ್ನ ಜ್ಞಾನ, ಆ ರೀತಿಯ ರೋಗಗಳನ್ನು ನೋಡಿದ ಅನುಭವ ಮತ್ತು ನಿಮ್ಮ ಸ್ವಾನುಭವದ –ನೋವು ಹೇಗಿತ್ತು, ಎಲ್ಲಿತ್ತು ಇತ್ಯಾದಿಗಳಿಂದ. ಅಂದಾಗ ವೈದ್ಯ ಪುರುಷನೇ ಅಥವಾ ಮಹಿಳೆಯೇ ಎಂಬ ಅಂಶ ಇಲ್ಲಿ ಗೌಣವಾಗುತ್ತದೆ.

ಮನೋವೈದ್ಯಕೀಯ  ಚಿಕಿತ್ಸೆಗೆ ಬರುವ ರೋಗಿಗಳು ಬಹಳ ತಲೆ ಕೆಡಿಸಿಕೊಳ್ಳುವ ಮತ್ತೊಂದು ಅಂಶವೂ ಇದೆ. ಅದು ಗೌಪ್ಯತೆಯ ಕುರಿತು. ಈ ಡಾಕ್ಟರ್ ಯಾರ ಬಳಿ ತನ್ನ ಬಗ್ಗೆ ಹೇಳಬಹುದು ಅಥವಾ ನಾನು ಇಲ್ಲಿ ಕುಳಿತಿರುವುದನ್ನು ಬೇರೆಯವರು ನೋಡಿದರೆ.. ಎಂಬ ಭಯ. ವೈದ್ಯಕೀಯ ಜಗತ್ತು ತನ್ನ ವ್ಯಾವಹಾರಿಕತೆಯಿಂದ ಬೇರೆ ಯಾವುದೇ ಅಪವಾದಕ್ಕೆ ಒಳಗಾಗಿರಲಿ, ಗೋಪ್ಯತೆಯ ವಿಷಯದಲ್ಲಿ ಮಾತ್ರ ಅದು ಈಗಲೂ ತನ್ನ ಬದ್ಧತೆಯನ್ನು ಉಳಿಸಿಕೊಂಡಿದೆ. 'ಡಾಕ್ಟ್ರು ಮತ್ತು ಲಾಯರ್ ಬಳಿ ಏನೂ ಮುಚ್ಚಿಡಬಾರದು ಹೇಳು, ಹೇಳು' ಎಂಬ ಮಾತುಗಳು ಅಕ್ಷರಶಃ ನಿಜವೇ ಆಗಿ ಉಳಿದಿದೆ.

ವೈದ್ಯ ಅಥವಾ ವೈದ್ಯೆ ನಡುವೆ ವ್ಯತ್ಯಾಸ ಇರಬಾರದು ನಿಜ. ಆದರೆ 'ಮಹಿಳೆ' ಎಂಬ ಮೂಲಭೂತ ಗುಣದಿಂದಲೇ ಭಿನ್ನ ಸ್ವರೂಪದ ಮಾನಸಿಕ ಸಮಸ್ಯೆಗಳನ್ನು ಎದುರಿಸುವ ಮಹಿಳೆಯರನ್ನು ಮೊದಲು ವೈದ್ಯನಾಗಲಿ, ವೈದ್ಯೆಯಾಗಲಿ 'ಮಹಿಳೆ'ಯಾಗಿ, ನಂತರ 'ಮನೋವೈದ್ಯೆ'ಯಾಗಿ ಅರ್ಥ ಮಾಡಿಕೊಳ್ಳುವುದು ಹೆಚ್ಚು ಉಪಯುಕ್ತವಾದೀತು ಎನ್ನುವುದನ್ನೂ ನಾವು ಮರೆಯಬಾರದು. ವೈದ್ಯಕೀಯ ವಿಜ್ಞಾನದ ಪ್ರಕಾರ, ಯಾವುದೇ ರೋಗ ದೈಹಿಕವಾಗಲಿ, ಮಾನಸಿಕವಾಗಲಿ, ಅದು ವ್ಯಕ್ತಿಯ  ಸಾಮಾಜಿಕ–ಸಾಂಸ್ಕೃತಿಕ ನೆಲೆಗಳನ್ನೂ ಜೈವಿಕ ನೆಲೆಯಷ್ಟೇ ಅವಲಂಬಿಸಿರುತ್ತದೆ. ಆದ್ದರಿಂದಲೇ ಎಷ್ಟೋ ಸಮಯ 'ಕಾಯಿಲೆ' ಇಂಥದ್ದೇ ಎಂಬುದು ಸ್ಪಷ್ಟವಾದರೂ ಪರಿಹಾರ ಸುಲಭವೆನಿಸುವುದಿಲ್ಲ.

ಉದಾಹರಣೆಗೆ ತಂಬಾಕು ವ್ಯಸನಕ್ಕೆ ಚಿಕಿತ್ಸೆ ನೀಡುವುದು ಔಷಧಿಯ ಜೊತೆಗೆ ವ್ಯಕ್ತಿಯ ಸಹವಾಸ, ಸಾಮಾಜಿಕ ಧೋರಣೆ, ಇವೆಲ್ಲದರ ಮೇಲೆ ಅವಲಂಬಿಸಿರುತ್ತದೆ. ಇದು ಮಾನಸಿಕ ರೋಗಗಳಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಮಹಿಳೆಗೆ ಸಂಬಂಧಿಸಿದ ಮಾನಸಿಕ ಸಮಸ್ಯೆಗಳಲ್ಲಂತೂ ಇವು ಎಷ್ಟು ಸಾಮಾನ್ಯವೆಂದರೆ ಸಾಮಾಜಿಕ– ಸಾಂಸ್ಕೃತಿಕ ನೆಲೆಗಳು ಕೆಲವೊಮ್ಮೆ ಜೈವಿಕ ನೆಲೆಗಳಿಗಿಂತ ಮುಖ್ಯವಾಗಿಬಿಡುತ್ತವೆ.

ಉದಾಹರಣೆಗೆ ಬಾಣಂತಿಯರಲ್ಲಿ ಬರುವ ಮಾನಸಿಕ ಸಮಸ್ಯೆಗಳನ್ನು ತೆಗೆದುಕೊಳ್ಳೋಣ. ಮಿದುಳಿನಲ್ಲಿ ಉಂಟಾಗುವ ರಾಸಾಯನಿಕ ಏರುಪೇರುಗಳು, ಹೆರಿಗೆಯ ಸಮಯದ ಹಾರ್ಮೋನುಗಳ ಅಸಮತೋಲನ ಈ ಮಾನಸಿಕ ಸಮಸ್ಯೆಗಳ ಮೂಲ ಕಾರಣಗಳು. ಆದರೆ ನಮ್ಮ ಭಾರತೀಯ ಮಹಿಳೆಯರಲ್ಲಿ ಈ ಸಮಸ್ಯೆಯ ಒಂದು ಸಾಮಾಜಿಕ ಕಾರಣ ಎರಡನೆಯ ಮಗುವೂ ಹೆಣ್ಣಾದಾಗ ಆ ಮಹಿಳೆ ಎದುರಿಸುವ ಅಸುರಕ್ಷಿತ ಭಾವ, ಕುಟುಂಬದ ಅಸಹಕಾರ, ಸಮಾಜದ ಅನುಕಂಪ, ಟೀಕೆ ಇತ್ಯಾದಿಗಳು. ಈ ಕಾರಣವನ್ನು ಆಕೆಯ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳುವುದು, ಅದಕ್ಕೆ ಸರಿಯಾದ ಸಲಹೆ ನೀಡುವುದು, ಕುಟುಂಬದ ಎಲ್ಲರನ್ನು ಈ 'ಅರಿವಿನ ಮಾತುಕತೆ'ಯಲ್ಲಿ ತೊಡಗಿಸುವುದು ಚಿಕಿತ್ಸೆಯ ಒಂದು ಪ್ರಮುಖ ಭಾಗವೇ ಆಗಿರುತ್ತದೆ.

ಹಾಗೆಯೇ ಮದ್ಯವ್ಯಸನಿಯ ಪತ್ನಿಯ ಖಿನ್ನತೆ; ಪತಿಯಿಂದ ಸಮಯ ಸಿಗದೆ, ಲೈಂಗಿಕ ತೃಪ್ತಿಯಿಲ್ಲದೆ ನರಳುವ ಮಹಿಳೆ; ಹೊಡೆಯುವ ಗಂಡನ ವಿರೋಧಿಸಲಾಗದೆ, ಇತರರಿಂದ 'ಹೇಗೋ ಹೊಂದಿಕೊಂಡು ಹೋಗು' ಎಂದು ಬುದ್ಧಿ ಹೇಳಿಸಿಕೊಳ್ಳುವ ಸ್ತ್ರೀ; ಬುದ್ಧಿಮಾಂದ್ಯ ಮಗುವನ್ನು ಒಬ್ಬಳೇ ಸದಾಕಾಲ ನಿಭಾಯಿಸಬೇಕಾದ ತಾಯಿ – ಇಂಥ ಮಹಿಳೆಯರನ್ನು ಚಿಕಿತ್ಸೆಗೆ ಒಳಪಡಿಸುವಾಗ 'ವೈದ್ಯ' ಪುರುಷನಾಗಿರಲಿ, ಮಹಿಳೆಯಾಗಿರಲಿ, 'ಹೆಣ್ಣುಗುಣ' ದ ಸೂಕ್ಷ್ಮತೆಯಿಂದ, ಹೆಣ್ಣಿನ ದೃಷ್ಟಿಕೋನವನ್ನು ತನ್ನದಾಗಿಸಿಕೊಂಡು ನೋಡಲೇಬೇಕಾಗುತ್ತದೆ. ಇದರಿಂದ ಪೂರ್ಣ ಪರಿಹಾರ ಸಾಧ್ಯವಾದೀತೆಂದು ಹೇಳಲಾಗದಿದ್ದರೂ ಕಡೆಯ ಪಕ್ಷ 'ನರಳುವ ಮಹಿಳೆ'ಗೆ ಒಂದಿಷ್ಟು ಸಾಂತ್ವನವಂತೂ ಸಿಗುತ್ತದೆ. ಹೀಗೆ ಸಿಗುವ ಮಾನಸಿಕ ಸಾಂತ್ವನ ಆಕೆಯ ಮನೋಬಲವನ್ನು ಬೆಳೆಸಬಲ್ಲದು. ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸುವಂತೆ ಮಾಡಬಲ್ಲದು.

ಇಲ್ಲೆಲ್ಲಾ ವೈದ್ಯ, ವ್ಯಕ್ತಿಗತವಾದ ತನ್ನ ರೂಢಿಬದ್ಧ ಧೋರಣೆಗಳಿಂದ ದೂರವಿರುತ್ತಾನೆ. ಹಾಗೆ ದೂರವಿರಬೇಕು ಎಂದು ವೈದ್ಯಕೀಯ ವಿಜ್ಞಾನವೂ ಬಯಸುತ್ತದೆ. ಮಹಿಳೆಯ 'ಭಾವನಾತ್ಮಕತೆ'ಯ ಬಲ, ಪುರುಷನ 'ಪ್ರಾಯೋಗಿಕತೆ'ಯ ಸಾಮರ್ಥ್ಯ ಎರಡನ್ನೂ ಅನುಭವಿಸಿ ವೈದ್ಯರು ತಮ್ಮದಾಗಿಸಿಕೊಂಡಿರುತ್ತಾರೆ ಎಂಬುದು ಹಿರಿಯ, ಅನುಭವೀ ವೈದ್ಯ, ವೈದ್ಯೆಯರನ್ನು ನೋಡಿದಾಗ ಸ್ಪಷ್ಟವಾಗುತ್ತದೆ.

ಇವೆಲ್ಲದರ ನಡುವೆಯೂ ಬಹಳಷ್ಟು ಜನ ವೈದ್ಯೆಗೆ ಮಾತ್ರ ಮಹಿಳೆಯರ ನೋವುಗಳು ಅರ್ಥವಾಗುತ್ತದೆ ಎಂದುಕೊಳ್ಳುತ್ತಾರೆ. ದಾಂಪತ್ಯಕ್ಕೆ ಸಂಬಂಧಿಸಿದ  ಸಮಸ್ಯೆಗಳಿಗೆ ಮಹಿಳೆಯರು ಒಬ್ಬ ಮಹಿಳೆಗೆ ಮಾತ್ರ ತಮ್ಮ ನೋವು ಅರ್ಥವಾದೀತೆಂದು 'ವೈದ್ಯೆ'ಯ ಬಳಿ ಹೋಗೋಣವೆಂದರೆ, ಪುರುಷರು ತಮ್ಮ ಕಷ್ಟ 'ವೈದ್ಯ'ನಿಗೆ ಮಾತ್ರ ಅರ್ಥವಾಗಬಹುದು ಎಂದು ದೃಢವಾಗಿ ನಂಬುತ್ತಾರೆ. ಇದಕ್ಕಿಂತಲೂ ನೋವಿನ ಸಂಗತಿ ಏನೆಂದರೆ ಸ್ತ್ರೀ ಸಬಲೀಕರಣ ಜೋರಾಗಿಯೇ ನಡೆದಿರುವ ಈ ಕಾಲದಲ್ಲಿಯೂ 'ವೈದ್ಯೆ'ಯರನ್ನು ವೈದ್ಯರಾಗಿ ನೋಡುವಲ್ಲಿ ಸಮಾಜಕ್ಕಿರುವ ಕಷ್ಟ!  ಗ್ರಾಮೀಣ ಮುಗ್ಧ ಜನರನ್ನು ಹೊರತುಪಡಿಸಿಯೂ ಇಂದೂ ವೈದ್ಯೆಯರನ್ನು 'ನರ್ಸ್' ಎಂದೇ ಜನರು ಕರೆಯುವ ರೂಢಿಯೂ ಮುಂದುವರಿದಿದೆ. ಹಾಗೆಯೇ ತುರ್ತುಪರಿಸ್ಥಿತಿಯ ಘಟಕಗಳಲ್ಲಂತೂ 'ವೈದ್ಯೆ'ಯರು ಜೀವ ಉಳಿಸಲು ಸಮರ್ಥರು ಎಂಬುದನ್ನು ಅನುಮಾನದಿಂದಲೇ ನೋಡುತ್ತಾ 'ಯಾರಾದರೂ ಡಾಕ್ಟ್ರನ್ನು ಕರಿಯಮ್ಮಾ'  ಎನ್ನುವವರು ಇನ್ನೂ ಇದ್ದಾರೆ!

ಈ ಸಮಸ್ಯೆಗೆ ಇನ್ನೊಂದು ಮುಖವೂ ಇದೆ. ಕೆಲವು ಪುರುಷ ರೋಗಿಗಳಿಗೆ 'ವೈದ್ಯೆ'ಯ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದು ಸಮಾಧಾನವೆನಿಸಿದರೆ, ಕೆಲವು ಮಹಿಳೆಯರಿಗೆ 'ವೈದ್ಯ'ರ ಬಳಿ ತಮ್ಮ ಒತ್ತಡಗಳನ್ನು ಬಿಚ್ಚಿಡುವುದು ಸುಲಭ. 'ವೈದ್ಯ' ಮತ್ತು 'ವೈದ್ಯೆ' ಪದಗಳಲ್ಲಿ ವ್ಯತ್ಯಾಸ, ವ್ಯಾಕರಣದ ದೃಷ್ಟಿಯಿಂದಲಾದರೂ ಇರಬಹುದು. ಆದರೆ 'ರೋಗಿ' ಪದಕ್ಕೆ ಯಾವ ಲಿಂಗ ವ್ಯತ್ಯಾಸವೂ ಇಲ್ಲ. ರೋಗಕ್ಕೂ, ನೋವಿಗೂ ಲಿಂಗಭೇದವಿಲ್ಲ.

'ರೋಗಿ' ಗಂಡಾಗಲೀ, ಹೆಣ್ಣಾಗಲೀ, ಅವರ ನೋವುಗಳನ್ನು ವೈದ್ಯ/ವೈದ್ಯೆ ಅರ್ಥಮಾಡಿಕೊಳ್ಳುವ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಬೇಕು. ಹಾಗೆ ಅರ್ಥಮಾಡಿಕೊಳ್ಳುವಲ್ಲಿ ಆತ/ಆಕೆ ತನ್ನ ಜ್ಞಾನದೊಂದಿಗೆ, ಸಾಮಾಜಿಕ ಅನುಭವವನ್ನೂ ಬೆರೆಸಬೇಕು. ಹಾಗಾಗಲು ತನ್ನ ಮನಸ್ಸಿನ 'ಹೆಣ್ಣು–ಗಂಡು' ಎರಡೂ ಗುಣಗಳನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ ಉಪಯೋಗಿಸಬೇಕು. ಆಗ ರೋಗಿಯ ಎದುರಿರುವ ವೈದ್ಯ ಹೆಣ್ಣು/ಗಂಡು ಯಾರೇ ಆದರೂ ರೋಗಿಗೆ ತನ್ನ ಸಮಸ್ಯೆಯನ್ನು ಬಿಚ್ಚಿಡುವುದರಲ್ಲಿ ಯಾವ ಸಂಕೋಚವೂ ಇರುವುದಿಲ್ಲ. ●